homeocare.in



**Dr. Srikant Morlawar (CMD)**

**Homeocare International**

# ಸಂತಾನಹೀನತೆಗೆ ಸರಿಯಾದ ಚಿಕಿತ್ಸೆ

ಇಂದು ಸಂತಾನಹೀನತೆ ಬಹಳಷ್ಟು ದೊಡ್ಡ ಸಮಸ್ಯೆಯಾಗಿದೆ. ಶೇಕಡಾ 7.8 ರಷ್ಟು ದಂಪತಿಗಳು ಸಂತಾನಹೀನತೆಯಿಂದ ಬಳಲುತ್ತಿದ್ದಾರೆ. ಇದಕ್ಕೆ ಕಾರಣ ಬದಲಾಗುತ್ತಿರುವ ಜೀವನ ಶೈಲಿ, ಆಹಾರ ಪದ್ಧತಿ, ಅತಿಯಾದ ಮಾನಸಿಕ ಒತ್ತಡ, ಕಲುಷಿತ ವಾತಾವರಣ ಮೊದಲಾದ ಸಮಸ್ಯೆಗಳಿಂದಾಗಿ ಭವಿಷ್ಯದಲ್ಲಿ ಈ ಸಮಸ್ಯೆ ಇನ್ನೂ ಉಲ್ಬಣಿಸಬಹುದು.

## ಸಂತಾನಹೀನತೆಯ ಎರಡು ರೀತಿಗಳು:

1) ಪ್ರೈಮರಿ ಇನ್ಫರ್ಟಿಲಿಟಿ: ಸ್ತ್ರೀಯರು ವಿವಾಹದ ನಂತರ ಒಂದು ವರ್ಷ ಕಾಲ ಸಾಧಾರಣ ಲೈಂಗಿಕ ಜೀವನ ನಡೆಸಿಯೂ ಗರ್ಭ ಧರಿಸದಿರುವುದು.
2) ಸೆಕೆಂಡರಿ ಇನ್ಫರ್ಟಿಲಿಟಿ: ಒಂದು ಬಾರಿ ಗರ್ಭಧರಿಸಿದ ನಂತರ ಮಕ್ಕಳಾಗದೇ ಇರುವುದು ಅಥವಾ ಗರ್ಭಪಾತಕ್ಕೆ ಗುರಿಯಾಗಿ ಎರಡನೇ ಬಾರಿ ಗರ್ಭಧರಿಸದೇ ಇರುವುದು.

## ಮಹಿಳೆಯರಲ್ಲಿ ಸಂತಾನಹೀನತೆ:

ಮಹಿಳೆಯು ಗರ್ಭಧರಿಸಬೇಕಾದರೆ ಮೊದಲು "ಅಂಡೋತ್ಪತ್ತಿ" ಸರಿಯಾಗಿರಬೇಕು. ಅನಂತರ ಇಂಪ್ಲಾಂಟೇಶನ್ ಆದಾಗ ಮಾತ್ರ ಗರ್ಭಧರಿಸಲು ಸಾಧ್ಯ. ಈ ಮೂರು ವಿಧಾನದಲ್ಲಿ ಏನೇ ವ್ಯತ್ಯಾಸಗಳು ಅಥವಾ ದೋಷಗಳು ಕಂಡುಬಂದರೂ ಗರ್ಭಧರಿಸಲು ಅಸಾಧ್ಯ.

ಹಾರ್ಮೋನಿನ ಸಮಸ್ಯೆಗಳು: ಥೈರಾಯ್ಡ್ ಸಮಸ್ಯೆಗಳಾದ ಹೈಪೋಥೈರಾಯ್ಡ್, ಹೈಪರ್ಥೈರಾಯ್ಡ್, ಪಿಸಿಬಿಡಿ, ಎಫ್‌ಎಸ್ಹೆಚ್, ಎಲ್ಹೆಚ್, ಪ್ರೊಲ್ಯಾಕ್ಟಿನ್ ಹಾರ್ಮೋನ್ಗಳ ಏರುಪೇರು, ಅಸಮತೋಲನ ಹಾರ್ಮೋನಿನಿಂದ ಅಂಡೋತ್ಪತ್ತಿ ಆಗದಿರಬಹುದು. ಗುಣಮಟ್ಟದ ಅಂಡಾಣುಗಳು ಬೆಳೆಯದೇ ಇರುವುದು, ಹೈಪೋಥಾಲಮಸ್ ಮತ್ತು ಪಿಟ್ಯುಟರಿ ಗ್ರಂಥಿಯು ಸರಿಯಾಗಿ ಕೆಲಸ ಮಾಡದಿರುವುದು, ಮುಟ್ಟು ಬೇಗನೇ ನಿಲ್ಲುವುದು, ಗರ್ಭನಾಳದಲ್ಲಿ ಅಡಚಣೆಗಳು ("ಪೆಲೋಪಿಯನ್ ಟ್ಯೂಬ್ನಲ್ಲಿ ಬ್ಲಾಕೇಜ್"), ಚಿಕ್ಕದಾದ ಗರ್ಭಾಶಯ ಅಥವಾ ಗರ್ಭಾಶಯ ಇಲ್ಲದೇ ಇರುವುದು, ಬೆಳವಣಿಗೆಯಲ್ಲಿ ಲೋಪದೋಷಗಳು ಇರುವುದು, ಎಂಡೋಮೆಟ್ರಿಯೋಸಿಸ್, ಪದೇಪದೇ ಗರ್ಭಪಾತವಾಗುವುದು, ಚಿಕ್ಕದಾದ ಯೋನಿ, ಮುಟ್ಟಿನ ಸಮಸ್ಯೆ ಇವೆಲ್ಲವೂ ಬಂಜೆತನಕ್ಕೆ ಕಾರಣವಾಗುತ್ತವೆ.

## ಪುರುಷರಲ್ಲಿ ಸಂತಾನಹೀನತೆ:

ಕಡಿಮೆ ವೀರ್ಯಾಣುಗಳ ಸಂಖ್ಯೆ (ಆಲಿಗೊಸ್ಪರ್ಮಿಯ) ಅಥವಾ ವೀರ್ಯಾಣುಗಳು ಇಲ್ಲದೇ ಇರುವುದು (ಅಜೋಸ್ಪರ್ಮಿಯ), ಕಡಿಮೆ ಸಂಖ್ಯೆಯಲ್ಲಿ ವೀರ್ಯಾಣುಗಳು ಉತ್ಪತ್ತಿಯಾಗುವುದು. ವೀರ್ಯಾಣುಗಳ ಉತ್ಪತ್ತಿ ಹಾಗೂ ಅದರ ಚಲನೆ ಕಡಿಮೆ ಇರುವುದು

- ವೃಷಣದಲ್ಲಿ ದ್ರವ ತುಂಬಿಕೊಳ್ಳುವುದು
- ಹಸ್ತಮೈಥುನ ಅಥವಾ ಅವಧಿಗೆ ಮುನ್ನವೇ ಸ್ಖಲನ
- ಮಧುಮೇಹ, ಹೈಪೋಥೈರಾಯ್ಡ್, ಉದ್ರೇಕದ ಸಮಸ್ಯೆ, ನರಗಳ ದೌರ್ಬಲ್ಯ, ಬೊಜ್ಜು ಹೆಚ್ಚಾಗಿರುವುದು, ವೆರಿಕೊಸಿಲ್ಲ, ಹೈಪೊಸಿಲ್, ಅತಿಯಾದ ದೇಹದ ಉಷ್ಣಾಂಶ ಕೂಡ ಸಂತಾನಹೀನತೆಗೆ ಕಾರಣವಾಗಬಹುದು.

## ಸಂತಾನಹೀನತೆಯ ಪರೀಕ್ಷೆಗಳು:

ಪುರುಷರಿಗೆ: ವೃಷಣಕೋಶದ ಯುಎಸ್ಜಿ, ಹಾರ್ಮೋನುಗಳ ತಪಾಸಣೆ, ಅಬ್ಡಮನ್ ಯುಎಸ್ಜಿ, ಥೈರಾಯ್ಡ್ ಹಾರ್ಮೋನುಗಳ ಬಗ್ಗೆ ತಪಾಸಣೆ. ಸ್ತ್ರೀಯರಿಗೆ: ಸಿಬಿಸಿ, ಇಎಸ್‌ಆರ್, ಸಿಯುಇ, ಎಫ್‌ಎಸ್ಹೆಚ್, ಪ್ರೊಲ್ಯಾಕ್ಟಿನ್ ಥೈರಾಯ್ಡ್ ಪ್ರೊಫೈಲ್, ಯುಎಸ್ಜಿ, ಅಬ್ಡಮನ್ ಎಸ್ಹೆಚ್ಜಿ, ಲ್ಯಾಪ್ರೊಸ್ಕೋಪಿ ಮತ್ತು ಫಾಲಿಕ್ಯುಲಾರ್ ಸ್ಟಡಿ.

ಹೋಮಿಯೊಕೇರ್ ಇಂಟರ್‌ನ್ಯಾಷನಲ್ ಚಿಕಿತ್ಸೆ: ಹೋಮಿಯೊಕೇರ್ ಇಂಟರ್‌ನ್ಯಾಷನಲ್ ಟ್ರೀಟ್ಮೆಂಟ್‌ನಲ್ಲಿ ಆನುವಂಶಿಕ (ಜೆನೆಟಿಕ್) ಸಾಂವಿಧಾನಿಕ (ಕಾನ್ಸಿಟಿಟ್ಯೂಷನಲ್) ವಿಧಾನದಿಂದ ಸ್ತ್ರೀಯರಲ್ಲಿ ಹಾಗೂ ಪುರುಷರಲ್ಲಿ ಸಂತಾನಹೀನತೆಯ ಸಮಸ್ಯೆಯನ್ನು ಶಾಶ್ವತವಾಗಿ ಗುಣಪಡಿಸಿ, ಮತ್ತೆ ಎರಡನೆಯ ಮೂರನೆಯ ಸಂತಾನಕ್ಕಾಗಿ ಮಾರ್ಗವನ್ನು ಸರಿಪಡಿಸಲಾಗುತ್ತದೆ. ಹೋಮಿಯೊಕೇರ್ ಇಂಟರ್‌ನ್ಯಾಷನಲ್ ಚಿಕಿತ್ಸೆ ಪಡೆದು ಬಹಳಷ್ಟು ಜನರು ಸಂತಾನಫಲ ಹೊಂದಿದ್ದಾರೆ. ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ನಲ್ಲಿ ಇನ್ನೂ ಬಹಳಷ್ಟು ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಇದರಲ್ಲಿ ಥೈರಾಯ್ಡ್ ಸಮಸ್ಯೆಗಳಾದ ಹೈಪೊ ಮತ್ತು ಹೈಪರ್, ಪಿಸಿಬಿಡಿ, ಮೈಗ್ರೇನ್, ಮಧುಮೇಹ, ಹೇರ್‌ಫಾಲ್, ಕಿಡ್ನಿ ಸಮಸ್ಯೆಗಳು, ಗ್ಯಾಸ್ಟ್ರಿಕ್ ಸಮಸ್ಯೆಗಳು, ಆರ್ಥ್ರೈಟಿಸ್ ಇನ್ನೂ ಇತರೆ ರೋಗಗಳಿಗೆ ಒಳ್ಳೆಯ ಚಿಕಿತ್ಸೆ ಕೊಡಲಾಗುತ್ತದೆ

HOMEOCARE INTERNATIONAL

**ಹೋಮಿಯೋಕೇರ್® ಇಂಟರ್‌ನ್ಯಾಷನಲ್**

ವರ್ಲ್ಡ್-ಕ್ಲಾಸ್ ಹೋಮಿಯೋಪತಿ

Free Consultation **955 000 1133**

Toll Free **1800 108 1212**

homeocare.in